ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-2, ಸಂಚಿಕೆ-1 ತ್ರೈಮಾಸಿಕ, ಜನವರಿ-ಮಾರ್ಚ್ 2015 ಪುಟಗಳು-12

## ತಮ್ಮೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

- ಸೌರಶಕ್ತಿ ಮೇಲ್ಛಾವಣಿ
- ಹೊಸ ವರ್ಷದ ಆಚರಣೆಗಳು
- ರಾಷ್ಟ್ರೀಯ ದಿನಾಚರಣೆ




# ಚಂಡಮಾರುತ ಸಂತ್ರಸ್ತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಸ್ಕಾಂ ತಂಡ

ಅಕ್ಟೋಬರ್ ತಿಂಗಳಿನಲ್ಲಿ ನೆರೆರಾಜ್ಯ ಆಂಧ್ರಪ್ರದೇಶಕ್ಕೆ ಹುಡ್-ಹುಡ್ ಚಂಡಮಾರುತ ಅಪ್ಪಳಿಸಿತ್ತು. ಚಂಡಮಾರುತಕ್ಕೆ ಸಿಲುಕಿ ಅಸ್ತವ್ಯಸ್ತಗೊಂಡಿದ್ದ ವಿದ್ಯುತ್ ಸಂಪರ್ಕ ವ್ಯವಸ್ಥೆಯ ದುರಸ್ತಿಗೆ ನೆರವು ನೀಡಲೆಂದು ಬೆಸ್ಕಾಂನ ವಿಶೇಷ ತಂಡವನ್ನು ಆಂಧ್ರಪ್ರದೇಶಕ್ಕೆ ಕಳಿಸಲಾಗಿತ್ತು. ತುಮಕೂರು ಎಸ್.ಇ. ಶ್ರೀ ಕೆ.ಟಿ. ಗೋವಿಂದರಾಜು ಅವರ ನೇತೃತ್ವದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಿ ಮೆಚ್ಚುಗೆಗೆ ಪಾತ್ರರಾದ ಎಲ್ಲ 17 ಇಂಜನಿಯರ್‌ಗಳು ಹಾಗೂ 122 ಲೈನ್‌ಮೆನ್‌ಗಳಿಗೂ ಹಾರ್ದಿಕ ಅಭಿನಂದನೆಗಳು.

–ಸಂಪಾದಕರು











# ವ್ಯವಸ್ಥಾಪಕ ನಿರ್ದೇಶಕರ ಸಂದೇಶ



**ಪಂಕಜ್‌ಕುಮಾರ್ ಪಾಂಡೆ**
ವ್ಯವಸ್ಥಾಪಕ ನಿರ್ದೇಶಕರು

ಆತ್ಮೀಯ ಸಹೋದ್ಯೋಗಿಗಳೆ,

ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಮತ್ತು ಮುಂದಿನ ದಿನಗಳಲ್ಲಿ ಅಕ್ರಮ–ಸಕ್ರಮ ಹಾಗೂ ಹೊಸದಾಗಿ ನೋಂದಾಯಿಸಲ್ಪಡುವ ಪಂಪ್‌ಸೆಟ್‌ಗಳು ಎಂಬ ಭೇದವಿಲ್ಲದೆ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕಲ್ಪಿಸಲುರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿರುವುದು ತಮಗೆಲ್ಲಾ ತಿಳಿದಿದೆ.

ಈ ಆದೇಶದಂತೆ ಸರ್ಕಾರವು ರೈತರ ಹೊಸ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಲು, ವಿದ್ಯುತ್ ಜಾಲದಲ್ಲಿ ಅಡಕಗೊಂಡ ಚಾಲ್ತಿಯಲ್ಲಿರುವ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮೀಕರಣಗೊಳಿಸಲು ಹಾಗೂ ಕೆಲವು ನೋಂದಾಯಿತ ಅರ್ಜಿದಾರರು ಸಕ್ರಮೀಕರಣ ಶುಲ್ಕ ಮತ್ತು ಇತರೆ ಠೇವಣಿಗಳನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

ರೈತರ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು 'ಬೆಸ್ಕಾಂ' ವತಿಯಿಂದ ಪ್ರತಿ ಗ್ರಾಮಪಂಚಾಯ್ತಿ ಮಟ್ಟದಲ್ಲಿ "ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕ ಮೇಳ" ವನ್ನು ಹಮ್ಮಿಕೊಂಡು ರೈತರಿಗೆ ಅಗತ್ಯ ಮಾಹಿತಿ ನೀಡುವಲ್ಲಿ ತಮ್ಮೆಲ್ಲರ ಸಹಕಾರ ಸ್ತುತ್ಯಾರ್ಹ.

ಸಾಂಪ್ರದಾಯಕ ಹಾಗೂ ಅಸಾಂಪ್ರದಾಯಕ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ದೀರ್ಘಾವಧಿ ಯೋಜನೆಗಳನ್ನು ಹಮ್ಮಿಕೊಂಡಿರುವ ಸರ್ಕಾರ ರಾಜ್ಯ ಎದುರಿಸಲಿರುವ ವಿದ್ಯುತ್ ಕೊರತೆಯನ್ನು ನೀಗಿಸಲು ಸಜ್ಜಾಗಿದೆ.

ಸರ್ಕಾರ ಪ್ರಕಟಿಸಿರುವ "ಸೌರವಿದ್ಯುತ್ ನೀತಿ"ಯನ್ನು ಸಮರ್ಪಕವಾಗಿ ಜಾರಿಗೆ ತರುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರದಾಗಿದೆ.


ಈ ಹಿಂದೆ ಕೂಡ ಬೆಸ್ಕಾಂನಲ್ಲಿ ವಿದ್ಯುತ್ ಬಳಕೆ ಶುಲ್ಕದ ಬಾಕಿ ವಸೂಲಿ ಕಾರ್ಯಾಚರಣೆಯನ್ನು ತಾವೆಲ್ಲರೂ ಯಶಸ್ವಿಗೊಳಿಸಿ ರೆವಿನ್ಯೂ ಸಂಗ್ರಹಣೆಯನ್ನು ಹೆಚ್ಚು ಮಾಡಿದ್ದೀರಿ, ಇದುಒಂದು ನಿರಂತರ ಪ್ರಕ್ರಿಯೆಯಾದ ಕಾರಣ ಪ್ರತಿ ಮಾಸಿಕದಲ್ಲೂ ಹೆಚ್ಚಿನ ಶುಲ್ಕ ವಸೂಲಿಗೆ ಗಮನ ನೀಡಬೇಕೆಂದು ಮನವಿ ಮಾಡುತ್ತೇನೆ.

ಯಾವುದೇಒಂದು ಸಂಸ್ಥೆ ಸುಗಮವಾಗಿ ಕಾರ್ಯ ನಿರ್ವಹಿಸಬೇಕಾದರೆ ಆ ಸಂಸ್ಥೆಯಆದಾಯ ಪ್ರಮುಖವೆಂಬುದುತಮಗೆಲ್ಲಾ ತಿಳಿದಿರುವ ಸಂಗತಿ, ಹಾಗಾಗಿ ಆದಾಯವನ್ನುಉತ್ತಮ ಪಡಿಸುವುದರತ್ತ ನಾವೆಲ್ಲಾ ಕಾರ್ಯೋನ್ಮುಖರಾಗೋಣ.

ಸಂಸ್ಥೆಯ ಉದ್ಯೋಗಿಗಳು ಗ್ರಾಹಕರೊಡನೆ ಹೆಚ್ಚಿನ ತಾಳ್ಮೆ, ಸಮಾಧಾನದಿಂದ ನಡೆದುಕೊಂಡು ಗ್ರಾಹಕರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರಕಿಸಬೇಕೆಂಬುದೇ ನಮ್ಮೆಲ್ಲರ ಆಶಯ. ಈ ನಿಟ್ಟಿನಲ್ಲಿ 'ಬೆಸ್ಕಾಂ' ಸಂಸ್ಥೆಯನ್ನು ಯಶಸ್ವಿ ಪಥದಲ್ಲಿ ಕೊಂಡೊಯ್ಯಲು ಸಹಕರಿಸಿ.

ತಮಗೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

## ಸಂಪಾದಕೀಯ...



ಆತ್ಮೀಯರೇ,

ಕಳೆದ ಕೆಲವು ವರ್ಷಗಳಿಂದ ಪ್ರಕಟಣೆಯನ್ನು ಸ್ಥಗಿತಗೊಳಿಸಿದ್ದ 'ಬೆಸ್ಕಾಂ' ಸಂಸ್ಥೆಯ ಗೃಹಪತ್ರಿಕೆಯನ್ನು "ಬೆಸ್ಕಾಂ ಸ್ನೇಹಿ" ಎಂಬ ಹೊಸ ಹೆಸರಿನೊಂದಿಗೆ ಮತ್ತೆ ಆರಂಭಿಸಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕೈಗೆ ಇಡುವಾಗ ಹೇಗೋ, ಏನೋ ಎಂಬ ಅಳುಕು ನಮ್ಮನ್ನು ಕಾಡಿತ್ತು.

ಪ್ರಥಮ ಸಂಚಿಕೆಯನ್ನು ಸುಂದರವಾದ ವಿನ್ಯಾಸ ಹಾಗೂ ಉತ್ತಮ ಮುದ್ರಣದೊಂದಿಗೆ 2014ರ ಜನವರಿಯಲ್ಲಿ ಬಿಡುಗಡೆ ಮಾಡಲಾಗಿತ್ತು. ಈಗ ಪತ್ರಿಕೆಯ ಪ್ರಕಟಣೆಯು ಒಂದು ವರ್ಷವನ್ನು ಪೂರ್ಣಗೊಳಿಸಿದೆ. ಈ ಅವಧಿಯಲ್ಲಿ ನಮಗೆ ಸಿಕ್ಕ ಪ್ರತಿಕ್ರಿಯೆ ಇನ್ನಷ್ಟು ಕ್ರಿಯಾಶೀಲರಾಗುವಂತೆ ಪ್ರೋತ್ಸಾಹಿಸಿದೆ.

ಕಳೆದ ನಾಲ್ಕು ಸಂಚಿಕೆಗಳಲ್ಲಿ ಪ್ರಕಟಿಸಿದ 'ಬೆಸ್ಕಾಂ'ನ ಕಾರ್ಯಚಟುವಟಿಕೆಗಳು, ಪ್ರಮುಖರ ಸಂದೇಶಗಳು ಹಾಗೂ ವಿವಿಧ ಮಾಹಿತಿಗಳನ್ನೊಳಗೊಂಡ ಲೇಖನಗಳು ಸೀಮಿತ ಪುಟಗಳಲ್ಲಿ ಪ್ರಕಟಗೊಂಡಿದ್ದರೂ 'ಒಟ್ಟಾರೆ ಪತ್ರಿಕೆಯು ಚೆನ್ನಾಗಿ ಮೂಡಿಬರುತ್ತಿದೆ' ಎಂಬ ಅಭಿಪ್ರಾಯವೇ ನಮಗೆ ಎಲ್ಲ ವಲಯಗಳಿಂದ ಬಂದಿದ್ದು ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ನಮ್ಮಲ್ಲಿ ಪ್ರತಿಭಾವಂತ ಸಿಬ್ಬಂದಿಗಳಿಗೇನೂ ಕೊರತೆ ಇಲ್ಲ, ಸಿಬ್ಬಂದಿ ಕಡೆಯಿಂದ ಕತೆ, ಕವನ ಹಾಗೂ ಲೇಖನಗಳನ್ನು ಆಹ್ವಾನಿಸಿದ್ದು, ಅದಕ್ಕೆ ನಿರೀಕ್ಷಿತ ಮಟ್ಟದಲ್ಲಿ ಪ್ರತಿಕ್ರಿಯೆ ದೊರೆಯಬೇಕಾಗಿದೆ. ತಾವು ಪತ್ರಿಕೆಗೆ ಬರೆಯುವ ಮನಸ್ಸು ಮಾಡುವಿರೆಂಬ ಆಶಯ ನನ್ನದು.

ಎರಡನೇ ವರ್ಷದ ಆವೃತ್ತಿಯಲ್ಲಾದರೂ, ಅವರ ಪ್ರತಿಭೆ ನಮಗೆ ಲೇಖನದ ರೂಪದಲ್ಲಿ ಸಿಗಲಿ ಎಂಬ ಹಾರೈಕೆ ನನ್ನದು. ಆ ಮೂಲಕ ನಮ್ಮ ಗೃಹ ಪತ್ರಿಕೆ ಇನ್ನಷ್ಟು ಸುಂದರವಾಗಿ ಬರಲಿ, ಈ ಕಾಯಕದಲ್ಲಿ ಸಿಬ್ಬಂದಿ ಪಾಲ್ಗೊಂಡರೆ ಸಂಪಾದಕೀಯ ಮಂಡಳಿಯ ಶ್ರಮ ಸಾರ್ಥಕವಾದಂತೆ. 'ಬೆಸ್ಕಾಂ ಸ್ನೇಹಿ'ಯನ್ನು ಇನ್ನಷ್ಟು ವಿಚಾರಪೂರ್ಣಗೊಳಿಸಲು ಎಲ್ಲರ ಕೊಡುಗೆ ಇದ್ದರೆ ಚೆಂದ ಎಂಬುದನ್ನು ತಾವು ಮನಗಾಣುವಿರಿ ಎಂದು ಭಾವಿಸಿದ್ದೇನೆ. ತಮ್ಮ ಸಹಕಾರಕ್ಕೆ ಮನಃಪೂರ್ವಕ ಸ್ವಾಗತ.

ಕಳೆದ ಒಂದು ವರ್ಷದ ಅವಧಿಯಲ್ಲಿ ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ದೀರ್ಘಕಾಲದ ಯೋಜನೆಗಳು ವಿದ್ಯುತ್ ಕೊರತೆ ನೀಗಿಸುವ ನಿಟ್ಟಿನಲ್ಲಿ ಸಹಕಾರಿಯಾಗಲಿವೆ.

ಇಂದಿನ ದಿನಗಳಲ್ಲಿ ಗೃಹಬಳಕೆ, ವಾಣಿಜ್ಯ ಬಳಕೆ, ಕೈಗಾರಿಕೆ ಹಾಗೂ ಕೃಷಿಗಾಗಿ ವಿದ್ಯುತ್ ಅವಲಂಬನೆ ಗರಿಷ್ಠ ಮಟ್ಟದಲ್ಲಿದೆ.

ರಾಜ್ಯದ ಜನತೆಗೆ ಬೆಳಕು ನೀಡುವ ಇಂಧನ ಇಲಾಖೆಯು ಕೈಗೊಂಡಿರುವ ಎಲ್ಲಾ ಯೋಜನೆಗಳು ಯಶಸ್ವಿಯಾಗಲಿ ಎಂಬುದೇ ನಮ್ಮ ಹಾರೈಕೆ.

ಇದುವರೆಗಿನ ಸಂಚಿಕೆಗಳಲ್ಲಿ ರಾಷ್ಟ್ರೀಯ ಹಬ್ಬ ಆಚರಣೆಗಳ ಪರಿಚಯವನ್ನು ನೀಡಲಾಗಿತ್ತು. ಈ ಸಂಚಿಕೆಯಿಂದ 'ರಾಷ್ಟ್ರೀಯ ಹಾಗೂ ವಿಶ್ವ ದಿನಾಚರಣೆಗಳ' ಪರಿಚಯದೊಂದಿಗೆ ಎರಡನೇ ವರ್ಷದ "ಬೆಸ್ಕಾಂ ಸ್ನೇಹಿ" ಆವೃತ್ತಿಯನ್ನು ತಮ್ಮ ಕೈಗಿಡುತ್ತಿದ್ದೇವೆ. ಅದರ ಬೆಳವಣಿಗೆಗೆ ಅಗತ್ಯವಾದ ಸಲಹೆ, ಸೂಚನೆಗಳಿಗೆ ಸದಾ ಸ್ವಾಗತ.

"ಬೆಸ್ಕಾಂ ಸ್ನೇಹಿ" ಗೃಹ ಪತ್ರಿಕೆಯನ್ನು ಪ್ರಾರಂಭಿಸಿದ 2014ರ ವರ್ಷಕ್ಕೆ ವಿದಾಯವನ್ನು ಹೇಳುತ್ತಾ, ತಮ್ಮೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

ವಂದನೆಗಳೊಂದಿಗೆ,

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.)

# ನಿಮ್ಮ ಮನೆಗೆ ನಿಮ್ಮದೆ ವಿದ್ಯುತ್

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಸೌರಶಕ್ತಿ ಮೇಲ್ಛಾವಣಿ" ಯೋಜನೆಗೆ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ.ಶಿವಕುಮಾರ್ ಅವರು ದಿನಾಂಕ 07.10.2014 ರಂದು ಬೆಸ್ಕಾಂ ಕೇಂದ್ರ ಕಚೇರಿಯಲ್ಲಿ ಚಾಲನೆ ನೀಡಿದರು. ಈ ಸೌರಶಕ್ತಿ ಮೇಲ್ಛಾವಣಿ ಯೋಜನೆಯು 200 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದಿಸುವ ನಿರೀಕ್ಷೆ ಹೊಂದಿದ್ದು ರಾಜ್ಯದಲ್ಲಿ ವಿದ್ಯುತ್ ಕ್ಷಾಮ ನಿವಾರಿಸುವಲ್ಲಿ ಸಾಕಷ್ಟು ಸಹಕಾರಿಯಾಗಲಿದೆ.



ಸೌರಶಕ್ತಿ ಮೇಲ್ಛಾವಣಿಯ ಅರ್ಜಿಗಳು ಆನ್‌ಲೈನ್‌ನಲ್ಲಿ ಲಭ್ಯವಿದ್ದು ಮನೆ,ಶೈಕ್ಷಣಿಕ ಸಂಸ್ಥೆ, ಕೈಗಾರಿಕಾ ಸಂಸ್ಥೆ, ಸರ್ಕಾರಿ ಇಲಾಖೆಗಳು ತಮ್ಮ ಕಟ್ಟಡದ ಮೇಲ್ಛಾವಣಿ ಮೇಲೆ ಈ ಘಟಕವನ್ನು ಅಳವಡಿಸಿಕೊಳ್ಳಬಹುದಾಗಿದೆ.

ಉತ್ಪಾದನೆಯಾಗುವ ಒಟ್ಟು ವಿದ್ಯುತ್‌ನಲ್ಲಿ ಮನೆಗೆ ಬಳಕೆಯಾಗಿ ಮಿಕ್ಕುವ ವಿದ್ಯುತ್ ಅನ್ನು ಬೆಸ್ಕಾಂ ಖರೀದಿಸಲಿದೆ. ಘಟಕ ಅಳವಡಿಸುವಾಗ ಕೇಂದ್ರ ಸರ್ಕಾರದ ಅನುದಾನ ಪಡೆದಿದ್ದಲ್ಲಿ ಯೂನಿಟೊಂದಕ್ಕೆ ರೂ. 7.20 ಅಥವಾ ಅನುದಾನ ಪಡೆಯದಿದಲ್ಲಿ ಯೂನಿಟೊಂದಕ್ಕೆ ರೂ. 9.56 ನೀಡಲಾಗುವುದು. ಖರೀದಿಯಾದ ವಿದ್ಯುತ್ ಹಣವನ್ನು ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.



ಕರ್ನಾಟಕ ಸರ್ಕಾರವು, ಗೃಹ ಹಾಗೂ ಇತರೆ ಕಟ್ಟಡಗಳ ಮೇಲ್ಛಾವಣಿ ಮೇಲೆ ಮತ್ತು ಮುಕ್ತ ಪ್ರದೇಶಗಳಲ್ಲಿ ಸೌರ ವಿದ್ಯುತ್ ಉತ್ಪಾದನೆಗೆ ಒತ್ತು ನೀಡಿ ಉತ್ತೇಜನ ನೀಡುತ್ತಿರುವುದು ಒಂದು ಪ್ರಗತಿಪರ ಚಿಂತನೆ ಎನ್ನಬಹುದು. ಬೆಸ್ಕಾಂ ನಿಗಮ ಕಚೇರಿಯ ಛಾವಣಿಯ ಮೇಲೆ 50 ಕಿಲೋವಾಟ್ ಸಾಮರ್ಥ್ಯದ ಘಟಕ ಸ್ಥಾಪಿಸಲಾಗಿದೆ. ಸ್ವಂತ ಮನೆ ಹೊಂದಿರುವ ಬಹುತೇಕ ಸಾರ್ವಜನಿಕರು ಹಾಗೂ ಖಾಲಿ ನಿವೇಶನ ಹೊಂದಿರುವವರು ಈ ಉತ್ತೇಜನದ ಉಪಯೋಗ ಪಡೆದುಕೊಂಡು ಸ್ವಂತ ಬಳಕೆ, ಧನಾರ್ಜನೆ ಹಾಗೂ ಪರೋಕ್ಷವಾಗಿ ಪರಿಸರ ರಕ್ಷಣೆ ಹಾಗೂ ದೇಶ ಸೇವೆಯ ಧ್ಯೇಯಗಳನ್ನು ಈಡೇರಿಸಿಕೊಳ್ಳಲು ಇದು ಒಂದು ಅತ್ಯುತ್ತಮ ಅವಕಾಶವಾಗಿದೆ.

ಒಂದು ಕಿಲೋ ವಾಟ್ ವಿದ್ಯುತ್ ಉತ್ಪಾದನೆಗೆ 100ಚದರ ಅಡಿ ಜಾಗ ಅಗತ್ಯವಾಗಿದ್ದು, ಸಾಧಾರಣವಾಗಿ ಕಟ್ಟಡದ ಛಾವಣಿಯ ವಿಸ್ತೀರ್ಣಕ್ಕೆ ಅನುಗುಣವಾಗಿ 3 ರಿಂದ 4 ಕಿಲೋ ವಾಟ್ ಉತ್ಪಾದನೆಗೆ ಅಗತ್ಯವಾದ ಸೌರ ಫಲಕಗಳನ್ನು ಅಳವಡಿಸಿಕೊಳ್ಳಬಹುದು. ಒಂದು ಕಿಲೋವಾಟ್‌ನ ಸೌರಫಲಕವು ಒಂದು ದಿನಕ್ಕೆ 4 ರಿಂದ 5 ಯೂನಿಟ್ ವಿದ್ಯುತ್ ಉತ್ಪಾದಿಸುತ್ತದೆ. ಸ್ವಂತಕ್ಕೆ ಅಗತ್ಯವಿರುವ ವಿದ್ಯುಚ್ಛಕ್ತಿ ಉಪಯೋಗಿಸಿಕೊಂಡು ಉಳಿಯುವ ವಿದ್ಯುಚ್ಛಕ್ತಿಯನ್ನು ವಿದ್ಯುತ್ ಸರಬರಾಜು ಕಂಪನಿಯ ವಿತರಣಾ ಜಾಲಕ್ಕೆ ಮಾರಬಹುದು. ಒಂದು ಕಿಲೋವಾಟ್ ವಿದ್ಯುತ್ ಫಲಕಕ್ಕೆ ಸುಮಾರು ರೂ.80,000/– ದಿಂದ ರೂ. 1,00,000/–ವೆಚ್ಚ ತಗಲುವುದು.



ಮೇಲ್ಛಾವಣಿ ಸೌರಶಕ್ತಿ ವಿದ್ಯುತ್ ಫಲಕ ಸ್ಥಾಪನೆಯಿಂದ ಪರೋಕ್ಷವಾಗಿ ಮೂರು ಉಪಯುಕ್ತತೆಗಳಿವೆ. ಒಂದನೆಯದು: ಸ್ಥಳ/ನಿವೇಶನದ ಸದುಪಯೋಗ. ಎರಡನೆಯದು: ನಾವು ಬಹುಮಟ್ಟಿಗೆ ಅವಲಂಬಿತವಾಗಿರುವ ಜಲ/ಶಾಖೋತ್ಪನ್ನ/ಅಣು ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಸಮನಾದ ಉಳಿತಾಯದಿಂದ ಅಷ್ಟರ ಮಟ್ಟಿನ ಪರಿಸರ ರಕ್ಷಣೆ ಮತ್ತು ಖರ್ಚು ವೆಚ್ಚಗಳಲ್ಲಿ ಉಳಿತಾಯವಾಗುತ್ತದೆ. ಮೂರನೆಯದು: ಕಲ್ಲಿದ್ದಲು ಆಮದಿನ ಪ್ರಮಾಣ ಕಡಿಮೆಯಾಗುವುದರಿಂದ ದೇಶದ ಅಮೂಲ್ಯ ವಿದೇಶಿ ವಿನಿಮಯದ ಉಳಿತಾಯದಿಂದ ಒಂದು ರೀತಿ ದೇಶ ಸೇವೆ.

ಇಷ್ಟೆಲ್ಲಾ ಪ್ರಯೋಜನವಿರುವ ಮೇಲ್ಛಾವಣಿ ಸೌರವಿದ್ಯುತ್ ಫಲಕಗಳನ್ನು ನಾವೇಕೆ ಅಳವಡಿಸಬಾರದು? ಸರ್ಕಾರದ ಪ್ರಯತ್ನಕ್ಕೆ ನಮ್ಮ ಸಹಕಾರವೂ ಇರಲಿ. ಅಲ್ಲವೇ?

ಸೌರಶಕ್ತಿ ಮೇಲ್ಛಾವಣಿ ಯೋಜನೆಯ ಕುರಿತಂತೆ ಹೆಚ್ಚಿನ ಮಾಹಿತಿಯನ್ನು ಬೆಸ್ಕಾಂನ ವೆಬ್‌ಸೈಟ್ www.bescom.org ಯಲ್ಲಿ ಪಡೆಯಬಹುದು. ಬೆಸ್ಕಾಂನ ಅಧಿಕಾರಿಗಳು/ಸಿಬ್ಬಂದಿಗಳು ಸೌರಶಕ್ತಿ ಮೇಲ್ಛಾವಣಿ ಕುರಿತು ತಮ್ಮ ವಿಭಾಗದ ಗ್ರಾಹಕರಿಗೆ ಮಾಹಿತಿ ನೀಡಿ ಈ ಯೋಜನೆಯನ್ನು ಯಶಸ್ವಿಗೊಳಿಸಲು ಈ ಮೂಲಕ ಕೋರಿದೆ.

# New Year celebration in Indian culture

Generally New Year is celebrated in different states of India at the time of harvesting of crops. Agriculture is still the predominant vocation of the people of India and because of this, New Year celebration in Inda often coincides with the beginning of the agricultural season of the region. This is the same day which is celebrated at other regioins of India with different names as:

UGADI- Karnataka, Andra Pradesh. The name Ugadi is derived from the name "Yuga Adi", which means 'the beginning of a new age'. Ugadi or Yugadi is a special festival in South India.

The significance of Ugadi stems from mythological times when Lord Brahma, the creator of the universe, began a series of wonderful creations, including that of the earth and all the life forms that live in it. The festival of Ugadi is celebrated to acknowledge that very day on which Lord Brahma started with the task. It is not only a New Year according to the Hindu calendar, but also sets the new astronomical cycle into motion.

The day also marks the beginning of spring season, which is considered to be the first of all seasons, with plants, shoots, and leaves coming to life and therefore, the day is believed to set things rolling for a fresh and successful new beginning.

BAISAKHI- Punjabi New Year: The biggest harvest festival celebrated across North Indian states, especially in the Land of Five River's Punjab.

GUDI PADWA- Marathi New Year: Gudi Padwa is celebrated on the first day of Chaitra month and it's a New Year day for Maharashtrians and Konkanis.

PUTHANDU- Tamil New Year: The traditional Tamil New Year starts on first day of Tamil month Chithirai.

BOHAG BIHU- Assamese New Year: The spring festival "Bohag Bihu" celebrated in the middle of April as the beginning season of agriculture.

POHELA BOISHAKH- Bengali New Year: The Nabo Barsho of Bengal is celebrated with great deal of enthusiasm and energy during the mid of April.

BESTU VARAS- Gujarati New Year: Bestu Varas mark the beginning of the harvest season in Gujrat and therefore is observed with great enthusiasm.

VISHU- Malayalam New Year: Vishu is similar to the New Year festivals observed elsewhere in India, usually on April 14 of the Gregorian calendar.

LOSOONG- Sikkimese New Year: The Losoong is one of the most popular and old age festivals of Sikkim, celebrated on month of December. It marks as the end of harvesting season and the New Year for people of Sikkim.

NAVREH- Kashmiri New Year: Navreh the lunar New Year is celebrated as New Year in Kashmir with great enthusiasm and sanctity. It's fall on first day of Chaitra Navratri and is regarded as sacred in Kashmir as the Shivratri.

HIJRI- Islamic New Year: The Islamic year start on the first day of Muharram. The New Year is celebrated with long standing customs & traditions for incoming spring.

CHETI CHAND- Sindhi New Year: Cheti Chand the Sindhi New Year is celebrated on the second day of the Chaitra month. It is one of the very auspicious days in Sindhi community as they celebrate the festival to honor of the birth of "Jhulelal".

KAVITHA.K
Manager, (ICT&MIS)

## ಕ್ರೀಡಾ ಸಾಧನೆ

ನಿಗಮ ಕಛೇರಿಯಲ್ಲಿ ಹಿರಿಯ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಸ್.ಕೆ. ನಾಗರಾಜ್, ಇವರು ನಮ್ಮ ಬೆಸ್ಕಾಂ ಹಾಗೂ ಕ.ವಿ.ಪ್ರ.ನಿ.ನಿ. ಕ್ರೀಡಾ ಕುಟುಂಬಕ್ಕೆ ಮುಕುಟ ಪ್ರಾಯರಲ್ಲೊಬ್ಬರು. ಕ್ರಿಕೆಟ್ ಆಟದಲ್ಲಿ ತನ್ನದೇ ಆದ ಶಿಸ್ತಿನ ಹಾದಿಯಲ್ಲಿ ನಡೆದುಬಂದಿರುವ ಇವರು ಒಬ್ಬ ಆಟಗಾರನಾಗಿ, ಅಂಪೈರ್ ಆಗಿರುವುದರ ಜೊತೆಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಸ್ಕೋರರ್ ಆಗಿ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಪುರುಷರ ಹಾಗೂ ಮಹಿಳೆಯರ ಕ್ರಿಕೆಟ್ ಪಂದ್ಯಗಳಲ್ಲಿ ಸ್ಕೋರರ್ ಆಗಿ ಕಳೆದ ಎರಡು ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಇತ್ತೀಚೆಗೆ ಮೈಸೂರು ಹಾಗೂ ಬೆಂಗಳೂರಿನಲ್ಲಿ ಭಾರತ ಹಾಗೂ ದಕ್ಷಿಣ ಆಫ್ರಿಕಾ ಮಹಿಳೆಯರ ತಂಡಗಳ ನಡುವೆ ನಡೆದ ಟೆಸ್ಟ್ ಹಾಗೂ ಏಕದಿನ ಅಂತರ ರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ದಕ್ಷಿಣ ಆಫ್ರಿಕಾ ತಂಡದ ಮುಖ್ಯ ಕೋಚ್ ಅವರಿಂದ ಪ್ರಶಂಸೆ ದೊರಕಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ.

ಮತ್ತಷ್ಟು ಯಶಸ್ಸು ಇವರದಾಗಲಿ ಎಂದು ನಾವೆಲ್ಲರೂ ಆಶಿಸೋಣ.

# ರೈಲು ಪ್ರಯಾಣದಲ್ಲಿನ ವಿಶಿಷ್ಟ ಅನುಭವಗಳು

ಬಿಡುವು ದೊರೆತಾಗ ಪ್ರಯಾಣ ಮಾಡುವುದು ನನ್ನ ಹವ್ಯಾಸವಾಗಿದ್ದು ರೈಲು ಪ್ರಯಾಣವನ್ನು ನಾನು ಹೆಚ್ಚು ಇಷ್ಟಪಡುತ್ತೇನೆ. ವೆಚ್ಚ, ಸುರಕ್ಷತೆ, ಆದಾಯ, ಓಡಾಡಲು ಅವಕಾಶಗಳ ದೃಷ್ಟಿಯಿಂದ ರೈಲು ಪ್ರಯಾಣ ನನಗೆ ಆಪ್ಯಾಯಮಾನವಾದುದು. ಇರಲಿ, ಪ್ರಯಾಣ ಮಾಡುವಾಗ ಅನೇಕ ಅನುಭವಗಳಿಗೆ ನಾವು ತೆರೆದುಕೊಳ್ಳಲ್ಪಡುತ್ತೇವಷ್ಟೆ. ಅದರಲ್ಲಿ ವಿಶಿಷ್ಟವೆನಿಸಿದ ಕೆಲವು ಅನುಭವಗಳನ್ನು ನಿಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ.

ಒಮ್ಮೆ ತುಮಕೂರಿಗೆ ಪ್ರಯಾಣಿಸುತ್ತಿರುವಾಗ ಉತ್ತರ ಭಾರತದ ಕಡೆಯ ಕಾರ್ಮಿಕರ ಗುಂಪೊಂದು ಗದ್ದಲದೊಡನೆ ಹತ್ತಿತು. ಅವರವರಲ್ಲೇ ಕುಶಾಲು ಮಾಡಿಕೊಂಡು ಸ್ವಲ್ಪ ಗಲಾಟೆಯೇ ಎನ್ನಿಸುವ ಸಂದರ್ಭ. ಆಗ ಇದ್ದಕ್ಕಿದ್ದಂತೆ ಒಬ್ಬನಿಗೆ ಮೊಬೈಲ್ ಕರೆ ಬಂದು, ಅವನು ಉತ್ತರಿಸುತ್ತ ಏರುದನಿಯಲ್ಲಿ ಹಿಂದಿಯಲ್ಲಿ "ಚಾಹಿಯೆತೋ ಬೇಚೂಂಗಾ, ಏ ಬೇಚೂಂಗಾ ವೋ ಬೇಚೂಂಗಾ ಎನ್ನುತ್ತಾ ಕಿಡ್ನಿ ಭೀ ಮೊಬೈಲ್ ಮೇಹೀ ಬೇಚೂಂಗಾ ಎಂದಾಗ ಅವಾಕ್ಕಾಗುವ ಸರದಿ ನನ್ನದಾಯಿತು.




ಇನ್ನೊಮ್ಮೆ ಅರಸೀಕೆರೆಗೆ ಪ್ರಯಾಣ ಮಾಡುತ್ತಿದ್ದೆ. ಉರ್ದು ಮಾತನಾಡುತ್ತಿದ್ದ ಮುಸ್ಲಿಂ ಸಂಸಾರವೊಂದು ಯಶವಂತಪುರದಲ್ಲಿ ರೈಲನ್ನು ಏರಿತು. ಗಂಡ–ಹೆಂಡತಿ, ಮೂರುಮಕ್ಕಳ ಕುಟುಂಬ, ಎಲ್ಲರೂ ಸುಂದರವಾಗಿದ್ದು, ಸಭ್ಯ ರೀತಿಯಲ್ಲಿ ವರ್ತಿಸುತ್ತಿದ್ದರು. ಸ್ವಲ್ಪಹೊತ್ತಿನ ನಂತರ ಮಾಮೂಲಿನಂತೆ ಕಡ್ಲೆಕಾಯಿ ಮಾರಲು ಬಂದಾಗ ಆದುವರೆಗೆ ಸುಮ್ಮನಿದ್ದ ಅವರ ಎರಡು ವರ್ಷದ ಸುಂದರ ಹೆಣ್ಣುಮಗು ಕಡ್ಲೆಕಾಯಿ ಕೊಡಿಸುವಂತೆ ಅವರಮ್ಮನ ಮೂಲಕ ಅಪ್ಪನಿಗೆ ಹೇಳಿಸಿತು. ಆತ ಒಪ್ಪಲಿಲ್ಲವೇನೋ, ನಂತರ ಸಮೋಸಾ ಬಂದಾಗಲೂ ಪುನರಾವರ್ತನೆಯಾಯಿತು. ಮಗುವಿಗೆ ಸಿಟ್ಟು ಬಂದಿತೇನೋ, ಸಭ್ಯರೀತಿಯಲ್ಲಿ ವರ್ತಿಸುತ್ತಿದ್ದ ಮಗು ಚುರುಮುರಿ ಬಂದಾಗ "ಕುತ್ತೇ ಮುಝೇ ಚರುಮುರಿ ಚಾಹಿಯೆ" ಎಂದಿತು. ಆಗಲೂ ಅಪ್ಪ ಬಗ್ಗದಿದ್ದಾಗ ಮಾತು ಮಾತಿಗೆ ಅಲ್ಪ ವಿರಾಮ ಕೊಟ್ಟು ಕುತ್ತೇ ಕುತ್ತೇ' ಎಂದು ಎಲ್ಲರಿಗೂ ಹೇಳಲಾರಂಭಿಸಿತು. ಆ ಕ್ಷಣಕ್ಕೆ ನನಗನ್ನಿಸಿದ್ದು ನೋಟಕ್ಕೂ ವರ್ತನೆಗೂ ಎಷ್ಟು ಅಜಗಜಾಂತರ!

ಆಗಾಗ ಪ್ಯಾಸೆಂಜರ್ ರೈಲಿನಲ್ಲಿ ಪ್ರಯಾಣಿಸುತ್ತಿರುತ್ತೇನೆ. ಒಬ್ಬರು ವಯಸ್ಸಾದವರು 3–4 ವರ್ಷದಿಂದ ದಿನಾಲೂ ತೆಲುಗಿನ ಒಂದು ಕೀರ್ತನೆಯನ್ನೇ ತಿರುಗಿ ತಿರುಗಿ ಹೇಳುತ್ತಾ ಭಿಕ್ಷೆ ಬೇಡುತ್ತಿದ್ದರು. ಅದೇ ಹಾಡು ಕೇಳಿ ಕೇಳಿ ನಮಗೇ ಆ ಹಾಡು ಅಭ್ಯಾಸವಾಗಿ ಹೋಗಿತ್ತು. ಅವರಿಗೆ ಬೇರೆ ಯಾವುದಾದರೂ ಕೀರ್ತನೆ ಹೇಳಿಕೊಡಬೇಕೆಂದು ನನಗೇ ಆಗಾಗ ಅನ್ನಿಸುತ್ತಿತ್ತು. ಇತ್ತೀಚಿನ ಪ್ರಯಾಣದಲ್ಲಿ ಅವರು ಹಳೆ ಕೀರ್ತನೆಯ ಜೊತೆಗೆ ಹೊಸ ಕೀರ್ತನೆ ಹಾಡುತ್ತಿದ್ದರು. ಆಗ ನನ್ನ ಪ್ರಾರ್ಥನೆ ಫಲಿಸಿತೆಂದುಕೊಂಡೆ.

ರೈಲಿನಲ್ಲಿ ಒಬ್ಬ ಚಕ್ಕುಲಿ ಮಾರಾಟಗಾರ ಹತ್ತು ರೂ.ಗೆ ಐದು ಚಕ್ಕುಲಿ ಹತ್ತು ರೂ.ಗೆ ಐದು ಕಜ್ಜಾಯ ಎಂದು ಪದೇ ಪದೇ ಏರುದನಿಯಲ್ಲಿ ಕೂಗುತ್ತಾ ಮಾರುತ್ತಿದ್ದ. ಒಮ್ಮೊಮ್ಮೆ ಮಾತು ತಪ್ಪಿ ಐದು ರೂ.ಗೆ ಹತ್ತು ಚಕ್ಕುಲಿ ಐದು ರೂ.ಗೆ ಹತ್ತು ಕಜ್ಜಾಯ ಎಂದು ಕೂಗುವುದುಂಟು. ಆಗ ನಾವು ಅಗ್ಗ ಎಂದು ಕರೆದು ಕೇಳಿದಾಗ ಹತ್ತು ರೂ, ಗೆ ಐದು ಚಕ್ಕುಲಿ ಸಾರ್ ಎಂದ. ಈಗಿನ್ನೂ 5 ರೂ.ಗೆ ಹತ್ತು ಎಂದು ಕೂಗಿದೆಯಲ್ಲಪ್ಪ ಎಂದರೆ ಹೊಟ್ಟೆಪಾಡು ಸಾರ್ ಎಂದೆನ್ನುತ್ತಾ ಮುಂದೆ ಸಾಗುವನು.

ಹುರಿಗಾಳು ಮಾರುವವನೊಬ್ಬ 'ಯಾರ್ರೀ ಶೇಂಗಾ, ಕಡ್ಲೇಬೀಜ, ಹುರಿಗಾಳೂ........' ಎಂದು ರಾಗವಾಗಿ ಕೂಗುತ್ತಿರುತ್ತಾನೆ. ನಾನು ಅವನ ಬಕೆಟ್‌ನಲ್ಲಿ ಹುರಿಗಾಳಿನೊಡನೆ ಕಡ್ಲೇಬೀಜ ಇದೆಯೋ ಎಂದು ಪ್ರತಿದಿನ ನೋಡಿದರೂ ಫಲಿತಾಂಶ ಶೂನ್ಯ. ಕಡ್ಲೆಬೀಜವಿಲ್ಲದಿದ್ದರೂ ಶೇಂಗಾ ಎಂದು ಅದೇಕೆ ಕೂಗುತ್ತಾನೋ ಅವನಿಗೇ ಗೊತ್ತು.

ಇಡ್ಲಿ ಮಾರಾಟಗಾರನೊಬ್ಬ ಆಗಾಗ ರೈಲಿನಲ್ಲಿ ಭೇಟಿ ಆಗುತ್ತಿರುತ್ತಾನೆ. ನಷ್ಟ ಅಲ್ಲಪ್ಪ 'ನಾಷ್ಟಾ' ಎಂದು ತಿಳಿ ಹೇಳಿದರೂ, ಅವನ ಉದ್ಗಾರ "ಯಾರ್ರೀ ನಷ್ಟಕ್ಕೆ ಇಡ್ಲಿ, ನಷ್ಟಕ್ಕೆ ಇಡ್ಲಿ" ಎಂದೇ. ಇನ್ನು ರೈಲಿನಲ್ಲಿ ಪುಸ್ತಕಗಳ ಮಾರಾಟಗಾರನೊಬ್ಬನ ಉದ್ಘೋಷ: "ನೋಡೋದಕ್ಕೆ ಕಾಸಿಲ್ಲ, ಜನರಲ್ ನಾಲೆಡ್ಜ್ ಅಲ್ಲಿ, ಅಡಿಗೆ ಪುಸ್ತಕ ಇಲ್ಲಿ, ಭಕ್ತಿಗೀತೆ ಅಲ್ಲಿ, ಜನಪದ ಗೀತೆ ಇಲ್ಲಿ" ಎಂದು. ಅವನು ಕೆಲವರಿಗೆ ಪುಸ್ತಕ ನೋಡಲು ಕೊಟ್ಟು, ಸುತ್ತಾಡಿ ವಾಪಸ್ ಬರುವ 10 ನಿಮಿಷದೊಳಗೆ ಅವರಿಗೆ ಬೇಕಾದ ಅಡಿಗೆ, ರಸಪ್ರಶ್ನೆ ಮುಂತಾದ ಪುಸ್ತಕಗಳನ್ನು ಮನಸ್ಸಿನಲ್ಲೇ ಸ್ಕ್ಯಾನ್ ಮಾಡಿ, ಪುಸ್ತಕ ಕೊಳ್ಳದೆ ವಾಪಸ್ ಮಾಡುವ ಕೆಲವು ಕಿಲಾಡಿ ಪ್ರಯಾಣಿಕರು ಸಿಕ್ಕುತ್ತಿರುತ್ತಾರೆ.

ದುಡ್ಡು ಕಳ್ಳತನವಾಗಿದೆ ಎನ್ನುವ ಸೋಗಿನಲ್ಲಿ ಕ್ಯಾತ್ಸಂದ್ರ ರೈಲ್ವೆ ಸ್ಟೇಷನಿನಲ್ಲಿ ಶುಭ್ರ ವಸ್ತ್ರಧರಿಸಿ ಪ್ರಯಾಣಿಕರಂತೆ ಕಾಣುತ್ತಿದ್ದ ವ್ಯಕ್ತಿಯೊಬ್ಬರು ಎಲ್ಲರನ್ನು ದುಡ್ಡು ಕೇಳುತ್ತಿದ್ದರು. ನಾವೂ ನಿಜವಾಗಿ ಕಳ್ಳತನವಾಗಿರಬಹುದೆಂದುಕೊಂಡು ದುಡ್ಡು ಕೊಟ್ಟೆವು. ನಂತರವೂ 3–4 ದಿನ ಸಿದ್ದಗಂಗಾಮಠದಲ್ಲಿ ಉಚಿತ ಊಟ–ವಸತಿ ಸೌಲಭ್ಯ ಉಪಯೋಗಿಸಿಕೊಂಡು ಅದೇ ರೀತಿ ಮುಂದುವರೆಸಿ, ನಮ್ಮನ್ನು ನೋಡಿದ ಕೂಡಲೇ ಬೇರೆಡೆಗೆ ಹೋಗಿ, ನೋಡದವರಂತೆ ನಟಿಸುತ್ತಿದ್ದರು. ಇಂತಹ ಸೋಗಲಾಡಿಗಳಿಂದ ನಿಜವಾದ ಅಗತ್ಯ ಇರುವವರನ್ನೂ ನಂಬದ ಸ್ಥಿತಿ ಉದ್ಭವಿಸುತ್ತದೆ. ಅಲ್ಲವೇ?

**–ಸಿ.ಕೆ. ಚಂದ್ರಶೇಖರ್**
ಉ.ಪ್ರ.ವ್ಯ. ಮತ್ತು ಕ.ಅ.ಅ.

# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

**4.03 ಅಂದಾಜು ಮತ್ತು ವಿದ್ಯುತ್ ಸರಬರಾಜು ಮಂಜೂರಾತಿ:**

**ದಿನಾಂಕ 22.07.2010 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಎಸ್: ಡಿ: 07: 10, ದಿನಾಂಕ 1.07.2010 ರ ಪ್ರಕಾರ ತಿದ್ದುಪಡಿಗೊಂಡ ಆವೃತ್ತಿ**

i) ಸರಬರಾಜು ಮುಖ್ಯ ಮಾರ್ಗಗಳ ಪ್ರವೇಶದ ಬಿಂದು, ಸೇವಾ ಮಾರ್ಗದ ಸ್ಥಾನ, ಕಟ್‌ಔಟ್(ಗಳು)/ವಿದ್ಯುತ್ ಹೊರೆ ನಿಯಂತ್ರಕ ಹಾಗೂ ಮಾಪಕ(ಗಳು)/ಮಾಪಕದ ಕ್ಯುಬಿಕಲ್(ಗಳನ್ನು) ವನ್ನು ಅಳವಡಿಸುವ ಸ್ಥಳವನ್ನು ನಿರ್ಧರಿಸಿದ ನಂತರ, ಲೈಸೆನ್ಸುದಾರರು ಗ್ರಾಹಕರಿಗೆ, ವಿದ್ಯುತ್ ಮಂಜೂರಾತಿಯ ಜೊತೆಗೆ, ಕ.ವಿ.ನಿ.ಆಯೋಗ(ವಿದ್ಯುತ್ ಸರಬರಾಜಿಗಾಗಿ ವೆಚ್ಚಗಳ ವಸೂಲಿ) ನಿಬಂಧನೆಗಳು, 2004 ಹಾಗೂ ಕಾಲಕಾಲಕ್ಕೆ ಅದರ ತಿದ್ದುಪಡಿ (ಅನುಬಂಧ–2) ರ ಪ್ರಕಾರ ಅವರು ಪಾವತಿಸಬೇಕಾದ ಯಾವುದೇ ವಿದ್ಯುತ್ ಮಾರ್ಗ/ವಿದ್ಯುತ್ ಸ್ಥಾವರದ ಅಳವಡಿಕೆಯ ವೆಚ್ಚ, ಕ.ವಿ.ನಿ.ಆಯೋಗ (ಭದ್ರತಾ ಠೇವಣಿ) ನಿಬಂಧನೆಗಳು, 2007 ರ ಪ್ರಕಾರ ಪ್ರಾರಂಭಿಕ ಭದ್ರತಾ ಠೇವಣಿ, ಮಾಪಕ ಭದ್ರತಾ ಠೇವಣಿಗಳನ್ನು ಹಾಗೂ ಇತರ ಶುಲ್ಕಗಳನ್ನು ನಿಗದಿತ ನಮೂನೆಯ ಪ್ರಕಾರ ಪಾವತಿಸಬೇಕೆಂದು ತಿಳಿಸತಕ್ಕದ್ದು.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಇಎನ್ 396 ಎನ್‌ಸಿಇ 2006 ದಿನಾಂಕ 13.11.2007ರ ಪ್ರಕಾರ ಸೌರ ಶಕ್ತಿ ನೀರು ಕಾಯಿಸುವ ಯಂತ್ರವನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಲೈಸೆನ್ಸುದಾರರು ವಿದ್ಯುತ್ ಮಂಜೂರಾತಿಯ ಪತ್ರದಲ್ಲಿ ನಮೂದಿಸಿರತಕ್ಕದ್ದು.

> **ಹಳೆಯ ಆವೃತಿ:** ಸರಬರಾಜು ಮಾರ್ಗ, ಸೇವಾ ಮಾರ್ಗದ ಸ್ಥಾನ, ಕಟ್‌ಔಟ್(ಗಳು)/ವಿದ್ಯುತ್ ಹೊರೆ ನಿಯಂತ್ರಕ, ಮಾಪಕ(ಗಳು) ಹಾಗೂ ಮಾಪಕದ ಕ್ಯೂಬಿಕಲ್‌ಗಳನ್ನು ಎಲ್ಲಿ ಅಳವಡಿಸಬೇಕು ಎಂದು ನಿರ್ಧರಿಸಿದ ನಂತರ, ಆ ಸ್ಥಾಪನದ ಆವರಣದಲ್ಲಿ ಅಳವಡಿಸಬೇಕಾದ ಯಾವುದೇ ವಿದ್ಯುತ್ ಮಾರ್ಗ, ವಿದ್ಯುತ್ ಸ್ಥಾವರದ ವೆಚ್ಚ ಹಾಗೂ ಕ.ವಿ.ನಿ. ಆಯೋಗ (ವಿದ್ಯುತ್ ಸರಬರಾಜು ಸಂಬಂಧಿತ ವೆಚ್ಚಗಳ ವಸೂಲಿ) ನಿಬಂಧನೆಗಳು, 2004, ಹಾಗೂ ಇದರ ಕಾಲಾತೀತ ತಿದ್ದುಪಡಿಗಳು(ಅನುಬಂಧ–2) ರ ಅಡಿಯಲ್ಲಿ ಪಾವತಿಸಬೇಕಾದ ಆರಂಭಿಕ ಭದ್ರತಾ ಠೇವಣಿ, ಮಾಪಕ ಭದ್ರತಾ ಠೇವಣಿ, ಇತರ ಶುಲ್ಕಗಳ ಒಟ್ಟು ಮೊತ್ತ, ಆಯೋಗವು ನಿರ್ಧರಿಸುವ ಠೇವಣಿಗಳನ್ನು ವಿದ್ಯುತ್ ಮಂಜೂರಾತಿಯ ಮಾಹಿತಿಯೊಡನೆ ಲೈಸೆನ್ಸುದಾರರು ಸಂಬಂಧಿತ ಅರ್ಜಿದಾರರಿಗೆ ತಿಳಿಸತಕ್ಕದ್ದು.

ii) ಸೇವಾ ಮಾರ್ಗವನ್ನು ಕಲ್ಪಿಸುವ ಮುನ್ನ ಅರ್ಜಿದಾರರು ಕೆಳಕಂಡ ಅಗತ್ಯತೆಗಳನ್ನು ಪೂರೈಸತಕ್ಕದ್ದು :

(ಎ) ಸೇವಾ ಮಾರ್ಗವು ಅರ್ಜಿದಾರರದಲ್ಲದೆ, ಇತರ ಯಾವುದೇ ವ್ಯಕ್ತಿಯ(ಗಳ) ಆವರಣದ ಮೂಲಕ ಹಾದುಹೋಗಬೇಕಾಗಿ ಬಂದರೆ, ಅಂತಹ ಮಾಲಿಕರಿಂದ ಒಪ್ಪಿಗೆ ಪತ್ರವನ್ನು ಸಲ್ಲಿಸತಕ್ಕದ್ದು. ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೌಕರ್ಯ ಕಲ್ಪಿಸಿದ ನಂತರ, ಆ ಆಸ್ತಿಯ ಮಾಲೀಕನು(ರು) ತನ್ನ ಒಪ್ಪಿಗೆಯನ್ನು ಹಿಂಪಡೆದುಕೊಂಡರೆ, ಕೂಡಲೇ ಈ ಅರ್ಜಿದಾರರ ಸ್ಥಾಪನಕ್ಕೆ ನೀಡಿರುವ ವಿದ್ಯುತ್ ಸರಬರಾಜು ಸೌಕರ್ಯವನ್ನು ಮುಂದುವರೆಸದಿರುವ ಹಕ್ಕನ್ನು ಲೈಸೆನ್ಸುದಾರರು ಹೊಂದಿರುತ್ತಾರೆ. ಪ್ರಾರಂಭಿಕ ಒಪ್ಪಂದದ ಅವಧಿಯು ಮುಕ್ತಾಯವಾಗುವವರೆಗೂ, ಗ್ರಾಹಕರು ಅಂತಹ ಸರಬರಾಜು ಮುಂದುವರೆಯದಿರುವ ಅವಧಿಗೂ ಸ್ಥಾಪನದ ಸೇವೆ ಮುಂದುವರೆದಿದ್ದರೆ ಪಾವತಿಸುತ್ತಿದ್ದ ಎಲ್ಲ ಬಾಕಿಗಳನ್ನು ಪಾವತಿಸಬೇಕಾಗುತ್ತದೆ.

(ಬಿ) ಕಲಮು 32.00 ರ ಪ್ರಕಾರ ಒಪ್ಪಂದ ಪತ್ರವನ್ನುಸಲ್ಲಿಸತಕ್ಕದ್ದು.

**ಟಿಪ್ಪಣಿ:** ಹೆಚ್ಚುವರಿ ವಿದ್ಯುತ್ ಸರಬರಾಜನ್ನು ಪಡೆದರೆ, ಒಟ್ಟಾರೆ ವಿದ್ಯುತ್ ಪ್ರಮಾಣಕ್ಕೆ ಒಪ್ಪಂದ ಪತ್ರವನ್ನು ನೀಡಬೇಕಾಗುತ್ತದೆ, ಹಾಗೂ ಈಗಾಗಲೇ ಸಲ್ಲಿಸಿರುವ ಒಪ್ಪಂದದ ಪತ್ರವು ರದ್ದಾಗುತ್ತದೆ.

(ಸಿ) ಕಲಮು 4.03(1)ರಲ್ಲಿ ಸೂಚಿಸಿರುವಂತೆ, ಆ ಸ್ಥಾಪನದ ಆವರಣದಲ್ಲಿ ಅಳವಡಿಸಬೇಕಾದ ಯಾವುದೇ ವಿದ್ಯುತ್ ಮಾರ್ಗ, ವಿದ್ಯುತ್ ಸ್ಥಾವರದ ವೆಚ್ಚ, ಆರಂಭಿಕ ಭದ್ರತಾ ಠೇವಣಿ, ಮಾಪಕ ಭದ್ರತಾ ಠೇವಣಿ ಹಾಗೂ ಇತರ ಶುಲ್ಕಗಳನ್ನು ಪಾವತಿಸುವುದು.

**ದಿನಾಂಕ 22.07.2010 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಎಸ್: ಡಿ: 07: 10, ದಿನಾಂಕ 1.07.2010ರ ಪ್ರಕಾರ ತಿದ್ದುಪಡಿಗೊಂಡ ಆವೃತಿ**

(ಡಿ) ವಿದ್ಯುತ್ ಗುತ್ತಿಗೆದಾರರ ಕಾರ್ಯಸಮಾಪನಾ ತನಿಖಾ ವರದಿಯೊಂದಿಗೆ ದ್ವಿಪ್ರತಿಯಲ್ಲಿ ವೈರಿಂಗ್ ನಕಾಸೆಯನ್ನು ಸಲ್ಲಿಸತಕ್ಕದ್ದು.

ಕಾರ್ಯಾದೇಶವನ್ನು ನೀಡುವುದಕ್ಕೆ ಮುಂಚಿತವಾಗಿ, ಸೌರಶಕ್ತಿ ನೀರು ಕಾಯಿಸುವ ಯಂತ್ರವನ್ನು ಸ್ಥಾಪಿಸಿರುವುದಾಗಿ ಅರ್ಜಿದಾರರು ಖಾಲಿ ಕಾಗದದ ಮೇಲೆ ವಾಗ್ದಾನ ಪತ್ರವನ್ನು ಸಲ್ಲಿಸತಕ್ಕದ್ದು. ಲೈಸೆನ್ಸುದಾರರು ಈ ದಸ್ತಾವೇಜುಗಳನ್ನು ಸ್ವೀಕರಿಸಿ, ಆ ರೀತಿ ಸ್ವೀಕರಿಸಿರುವುದಕ್ಕೆ ಅರ್ಜಿದಾರರಿಗೆ ತಲುಪೋಪ್ಪಿಗೆಯ ದೃಢೀಕರಣವನ್ನು ನೀಡತಕ್ಕದ್ದು.

> **ಹಳೆಯ ಆವೃತಿ:** ಸ್ಥಾಪನದ ವಿದ್ಯುತ್ ವೈರಿಂಗ್ ಕಾರ್ಯ ಪೂರ್ಣಗೊಂಡಿರುವುದರ ಬಗ್ಗೆ ಆ ಕಾರ್ಯವನ್ನು ನಿರ್ವಹಿಸಿದ ವಿದ್ಯುತ್ ಗುತ್ತಿಗೆದಾರರು ನೀಡಿರುವ ಕಾರ್ಯಸಮಾಪನಾ ತನಿಖಾ ವರದಿ ಹಾಗೂ ವೈರಿಂಗ್ ನಕಾಸೆಯ ಪ್ರತಿ(ದ್ವಿಪ್ರತಿ)ಯನ್ನು ಸಲ್ಲಿಸುವುದು. ಲೈಸೆನ್ಸುದಾರರು ಕಾರ್ಯಸಮಾಪನಾ ತನಿಖಾ ವರದಿಯನ್ನು ಸ್ವೀಕರಿಸಿ, ವರದಿಯನ್ನು ಸ್ವೀಕರಿಸಿರುವುದಕ್ಕೆ ತಲುಪೋಪ್ಪಿಗೆಯನ್ನು ಅರ್ಜಿದಾರರಿಗೆ ನೀಡತಕ್ಕದ್ದು.

(ಇ) ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೌಕರ್ಯ ಕಲ್ಪಿಸಿದ ನಂತರ, ಆವರಣದ ಮಾಲಿಕ ಹಾಗೂ ಅನುಭೋಗದಾರರ ನಡುವೆ ಯಾವುದೇ ವ್ಯಾಜ್ಯ ಉಂಟಾದರೆ, ಪರಿಣಾಮವಾಗಿ ನಷ್ಟ ಉಂಟಾದರೆ, ಅಂತಹ ನಷ್ಟಭರ್ತಿ ಮಾಡಿಕೊಡುವುದಾಗಿ, ಅನುಬಂಧ–8ರ ಪ್ರಕಾರ ನಷ್ಟಭರ್ತಿ ಮುಚ್ಚಳಿಕೆಯನ್ನು ನೀಡತಕ್ಕದ್ದು.

*ಮುಂದುವರಿಯುವುದು....*

# ಚಾಂಪಿಯನ್ ತಂಡಕ್ಕೆ ಅಭಿನಂದನೆಗಳು


ಸೆಪ್ಟಂಬರ್ 2014 ರಂದು ಆಯೋಜಿಸಲಾಗಿದ್ದ ಸುಫಿಯಾನ್ ಸೂಪರ್ ಸಿಕ್ಸ್ ಟಿ–20 ಕ್ರಿಕೆಟ್ ಪಂದ್ಯಾವಳಿಯಲ್ಲಿ ಫೈನಲ್ಸ್ ಗೆದ್ದ ಬೆಸ್ಕಾಂ ತಂಡ ಚಾಂಪಿಯನ್ ಪಟ್ಟಕ್ಕೇರಿದೆ. ಖಾಸಗಿ ಹಾಗೂ ಸರ್ಕಾರಿ ನಿಗಮ ಕಛೇರಿಗಳ ತಂಡಗಳ ಮಧ್ಯ ಸುಫಿಯಾನ್ ಸೂಪರ್ ಸಿಕ್ಸ್ ಟಿ–20 ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸಲಾಗುತ್ತದೆ. ಇದೇ ಪ್ರಥಮ ಬಾರಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಬೆಸ್ಕಾಂ ತಂಡ ಜೂನಿಫರ್ ನೆಟ್‌ವರ್ಕ್ ತಂಡವನ್ನು ಸೋಲಿಸಿ ಚಾಂಪಿಯನ್ ಸ್ಥಾನಕ್ಕೇರಿದೆ. 160 ರನ್‌ಗಳಿಸಿ ಎಸ್. ರಾಜಶೇಖರ್ ಅತ್ಯುತ್ತಮ ಬ್ಯಾಟ್ಸ್‌ಮನ್, 14 ವಿಕೆಟ್ ಪಡೆದ ಕೆ.ಎಲ್.ಗುರುಪ್ರಸಾದ್ ಅತ್ಯುತ್ತಮ ಬೌಲರ್ ಹಾಗೂ ತಂಡದ ಕ್ಯಾಪ್ಟನ್ ಆರ್. ಮಂಜುನಾಥ 152 ರನ್ ಹಾಗೂ 8 ವಿಕೆಟ್ ಪಡೆದು ಅತ್ಯುತ್ತಮ ಆಲರೌಂಡರ್ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಪ್ರಶಸ್ತಿ ಗೆದ್ದ ತಂಡಕ್ಕೆ ಬೆಸ್ಕಾಂ ಸ್ನೇಹಿ ಪತ್ರಿಕೆ ಪರವಾಗಿ ಹಾರ್ದಿಕ ಅಭಿನಂದನೆಗಳು.





# ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು: ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕನ್ನಡದ 'ಆಸ್ತಿ' ಮಾಸ್ತಿ. ಮಾಸ್ತಿ ವೆಂಕಟೇಶ ಅಯ್ಯಂಗಾರರು–ಕನ್ನಡದ ಒಬ್ಬ ಅಪ್ರತಿಮ ಲೇಖಕರು. ಕನ್ನಡ ಸಾಹಿತ್ಯ ಲೋಕದಲ್ಲಿ ಮಾಸ್ತಿ ಎಂದೇ ಖ್ಯಾತರಾಗಿರುವ ಇವರನ್ನು 'ಕನ್ನಡದ ಆಸ್ತಿ' ಎಂದೇ ಎಲ್ಲರೂ ಕರೆಯುತ್ತಿದ್ದರು. ಶ್ರೀನಿವಾಸ ಎಂಬುದು ಇವರ ಕಾವ್ಯನಾಮ.



ಮಾಸ್ತಿ ಅವರು ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿ 1891ರ ಜೂನ್ 6ರಂದು ಜನಿಸಿದರು. ಮದರಾಸು ವಿಶ್ವವಿದ್ಯಾಲಯದಿಂದ ಎಂ.ಎ ಪದವಿ ಪಡೆದ ಅವರು, ಮೈಸೂರು ವಿಶ್ವವಿದ್ಯಾಲಯದಿಂದ ಡಿ.ಲಿಟ್, ಕರ್ನಾಟಕ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಪಡೆದರು. ಆಗಿನ ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ವೃತ್ತಿ ಜೀವನ ಆರಂಭಿಸಿದರು. 1914 ರಿಂದ 1943 ರವರೆಗೆ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ನಿವೃತ್ತರಾದರು.

1920ರಲ್ಲಿ ಅವರ ಮೊದಲ ಪುಸ್ತಕ ಕೆಲವು ಸಣ್ಣ ಕಥೆಗಳು ಪ್ರಕಟಗೊಂಡಿತು. 1910 ರಲ್ಲಿ ಬರೆದ 'ರಂಗನ ಮದುವೆ' ಎಂಬ ಸಣ್ಣ ಕಥೆಗಳ ಸಂಗ್ರಹದಿಂದ ಹಿಡಿದು ಅವರು ನಿಧನರಾಗುವುದಕ್ಕೆ ಕೆಲವೇ ತಿಂಗಳುಗಳ ಹಿಂದೆ ಪ್ರಕಟವಾದ 'ಮಾತುಗಾರ ರಾಮಣ್ಣ' ಎಂಬ ಕೃತಿಯವರೆಗೆ ಅವರು ರಚಿಸಿದ ಕೃತಿಗಳ ಸಂಖ್ಯೆ 123. ಇದರಲ್ಲಿ ಸಣ್ಣಕತೆಗಳು, ಕಾದಂಬರಿಗಳು, ನಾಟಕಗಳು, ವಿಮರ್ಶೆಗಳು, ಪ್ರಬಂಧಗಳು, ಧಾರ್ಮಿಕ ಕೃತಿಗಳು, ಅನುವಾದ, "ಜೀವನ" ಎಂಬ ಅವರೇ ನಡೆಸುತ್ತಿದ್ದ ಪತ್ರಿಕೆಯಲ್ಲಿ ಬರೆದ ಸಂಪಾದಕೀಯ ಲೇಖನಗಳು, ಕವಿತೆಗಳ ಸಂಗ್ರಹ, ಕಾವ್ಯ ಸೇರಿವೆ.

1983ರಲ್ಲಿ 'ಚಿಕ್ಕವೀರರಾಜೇಂದ್ರ' ಕಾದಂಬರಿಗಾಗಿ ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತಗೊಂಡ ಮಾಸ್ತಿಯವರು ಕನ್ನಡಕ್ಕೆ ನಾಲ್ಕನೇ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟರು. ಜೀವನಪರ್ಯಂತ ಕನ್ನಡ ಸೇವೆಯನ್ನು ಮಾಡಿದ ಮಾಸ್ತಿಯವರು 1986ರಲ್ಲಿ ನಿಧನ ಹೊಂದಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿ, ದಕ್ಷಿಣ ಭಾರತ ಸಾಹಿತಿಗಳ ಸಮ್ಮೇಳನ ಅಧ್ಯಕ್ಷ ಪದವಿ ಸೇರಿದಂತೆ ವಿವಿಧ ಪ್ರಶಸ್ತಿ, ಪದವಿಗಳಿಗೆ ಭಾಜನರಾಗಿದ್ದಾರೆ.

# ರಾಷ್ಟ್ರೀಯ ದಿನಾಚರಣೆ

### ರಾಷ್ಟ್ರೀಯ ಯುವದಿನ-(ಜನವರಿ 12)

ಅಪ್ರತಿಮ ದೇಶಭಕ್ತ, ಯುವಶಕ್ತಿಯ ಚೇತನ, ಶ್ರೀ ರಾಮಕೃಷ್ಣ ಪರಮಹಂಸರ ಪ್ರಿಯ ಶಿಷ್ಯ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು (1863 ಜನವರಿ 12) ರಾಷ್ಟ್ರೀಯ ಯುವದಿನ ಎಂದು ಆಚರಿಸಲಾಗುತ್ತದೆ.



'ವ್ಯಕ್ತಿ ತಾನು ದುರ್ಬಲನೆಂದು ಭಾವಿಸಬಾರದು. ಏಕೆಂದರೆ ದೌರ್ಬಲ್ಯವೇ ಪಾಪ, ದೌರ್ಬಲ್ಯವೇ ಮರಣ. ತನ್ನ ದೌರ್ಬಲ್ಯವನ್ನು ಗೆಲ್ಲುವುದರಿಂದ ಎಲ್ಲವನ್ನೂ ಸಾಧಿಸಬಹುದು. ತನ್ನ ಆತ್ಮವಿಶ್ವಾಸದಿಂದ ಎದ್ದು ನಿಲ್ಲಬೇಕು, ತನ್ನೊಳಗಿರುವ ದೈವಿಕತೆಯನ್ನು ಹೊರಚಿಮ್ಮಬೇಕು' ಎಂಬ ಘೋಷಣೆಯೊಂದಿಗೆ ದೇಶದ ಯುವಕರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದ ಮಹಾನ್ ವ್ಯಕ್ತಿ ಸ್ವಾಮಿ ವಿವೇಕಾನಂದರು. ದೇಶದ ಯುವ ಶಕ್ತಿಗಳಿಗೆ ಆಂತರ್ಯದ ಸತ್ವ ತುಂಬುವಲ್ಲಿ ಯಶಸ್ವಿಯಾದ ಅದ್ಭುತ ತತ್ವಜ್ಞಾನಿ ಅವರು.

ಅಮೆರಿಕದ ಚಿಕಾಗೊದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಹಿಂದೂ ಧರ್ಮದ ಮೌಲ್ಯದ ಪರಿಚಯ ಮಾಡಿಕೊಟ್ಟ ವಿವೇಕಾನಂದರ ಭಾಷಣ ವಿಶ್ವ ವಿಖ್ಯಾತವಾಗಿದೆ. 'ಅಮೆರಿಕದ ಸಹೋದರ ಸಹೋದರಿಯರೇ' ಎಂಬ ಸಂಬೋಧನೆಯೊಂದಿಗೆ ಪ್ರಾರಂಭವಾದ ಅವರ ಭಾಷಣ ಅಲ್ಲಿ ನೆರೆದಿದ್ದ ಭಾರಿ ಸಂಖ್ಯೆಯ ಜನರನ್ನು ಗೆದ್ದಿತ್ತು. ಪಾಶ್ಚಾತ್ಯರಿಂದ 'ವಿಚಿತ್ರ ಧರ್ಮ' ಎಂದು ಕರೆಯಿಸಿಕೊಂಡಿದ್ದ ಹಿಂದೂ ಧರ್ಮದ ನಿಜವಾದ ಅರ್ಥವನ್ನು, ಸಿದ್ಧಾಂತಗಳನ್ನು ಪಾಶ್ಚಾತ್ಯರಿಗೆ ಮನದಟ್ಟು ಮಾಡುವಲ್ಲಿ ಯಶಸ್ವಿಯಾದವರು ಸ್ವಾಮಿ ವಿವೇಕಾನಂದ. ಯುವ ಶಕ್ತಿಯೇ ದೇಶದ ಶಕ್ತಿ ಎಂಬ ಘೋಷಣೆ ಸಾರಿದ ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸುವುದರ ಮೂಲಕ ಸರಕಾರ ವಿವೇಕಾನಂದರಿಗೆ ಗೌರವ ಸೂಚಿಸಿದೆ.

### ಭೂ ಸೇನಾ ದಿನ-(ಜನವರಿ 15)

ಪ್ರತಿ ವರ್ಷ ಜನವರಿ 15 ರಂದು ಭೂ ಸೇನಾ ದಿನ ಆಚರಿಸಲಾಗುತ್ತದೆ. ಕೊಡಗಿನ ಹೆಮ್ಮೆಯ ಪುತ್ರ ಜನರಲ್ ಕೊಡಂದೆರ ಮಾದಪ್ಪ ಕಾರಿಯಪ್ಪ (ಕೆ.ಎಂ.ಕಾರಿಯಪ್ಪ) ಅವರು ಸರ್ ರಾಯ್ ಬೌಚರ್ ಅವರಿಂದ ಭೂ ಸೇನೆಯ ಮೊದಲ ಕಮಾಂಡರ್ ಇನ್ ಚೀಫ್ ಆಗಿ ಅಧಿಕಾರ ಸ್ವೀಕರಿಸಿದ ದಿನ ಇದಾಗಿದೆ.



1986ರಲ್ಲಿ ಭಾರತದ ಪ್ರಥಮ ಸೇನಾ ದಂಡನಾಯಕರಾದ 37ನೇ ವರ್ಷಾಚರಣೆ ಸಂದರ್ಭದಲ್ಲಿ ಜನರಲ್ ಕಾರಿಯಪ್ಪ ಅವರಿಗೆ 'ಫೀಲ್ಡ್ ಮಾರ್ಷಲ್' (ಮಹಾದಂಡನಾಯಕ) ಹುದ್ದೆಗೆ ಬಡ್ತಿ ನೀಡಲಾಯಿತು.

28ನೆಯ ಜನವರಿ, 1899ರಂದು ಕೊಡಗಿನ ಶನಿವಾರಸಂತೆಯಲ್ಲಿ ಜನಿಸಿದ ಕಾರಿಯಪ್ಪನವರು ಬ್ರಿಟನ್ನಿನ ಕಿಂಬೆರ್ಲಿಯಲ್ಲಿರುವ ಇಂಪೀರಿಯಲ್ ಡಿಫೆನ್ಸ್ ಕಾಲೇಜಿನಲ್ಲಿ ಯುದ್ಧದ ಉನ್ನತ ಮಟ್ಟದ ತಂತ್ರಗಳ ಬಗ್ಗೆ ತರಬೇತಿ ಪಡೆದ ಪ್ರಥಮ ಭಾರತೀಯ.

### ಅಂತರರಾಷ್ಟ್ರೀಯ ಮಹಿಳಾ ದಿನ-(ಮಾರ್ಚ್ 8)

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರತಿ ವರ್ಷ ಮಾರ್ಚ್ 8 ರಂದು ಆಚರಿಸಲಾಗುತ್ತದೆ. ಈ ದಿನದಂದು ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಾಧನೆಗಳನ್ನು ನೆನೆಯಲಾಗುತ್ತದೆ. ವಿಶ್ವದಾದ್ಯಂತ ಅನೇಕ ದೇಶಗಳಲ್ಲಿ ಈ ದಿನವನ್ನು ಆಚರಿಸುತ್ತಾರೆ. ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಅತ್ಯುನ್ನತ ಸಾಧನೆ ಮಾಡುತ್ತಿರುವ ಕಾರಣ, ಅಂಥ ಮಹಿಳೆಯರ ಪ್ರಗತಿಯನ್ನು ಗುರುತಿಸಿ ಈ ದಿನವನ್ನು ಅವರಿಗೆ ಅರ್ಪಿಸಲಾಗಿದೆ.

1907ರ ಮಾರ್ಚ್ 8ರಂದು ನ್ಯೂಯಾರ್ಕಿನ ಸಿದ್ಧ ಉಡುಪಿನ ಕಾರ್ಖಾನೆಯ ಮಹಿಳೆಯರು ತಮ್ಮ ಬೇಡಿಕೆಗಳೊಂದಿಗೆ ಬೀದಿಗಿಳಿದರು. ಈ ಪ್ರತಿಭಟನೆಯಿಂದ ಅವರ ಬೇಡಿಕೆ ಈಡೇರಿತೋ ಇಲ್ಲವೋ, ಆದರೆ ಮಹಿಳಾ ದಿನ ಸಂಘಟಿತ ರೂಪು ಪಡೆಯುವಲ್ಲಿ ಮೊದಲ ಹೆಜ್ಜೆಯಾಯಿತು. 1910 ರಲ್ಲಿ ಈ ದಿನವನ್ನು ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಬೇಕೆಂದು ಮಹಿಳಾ ಚಳವಳಿಯ ನಾಯಕಿ ಕ್ಲಾರಾ ಜೆಟ್‌ಕಿನ್ ಸಮಾವೇಶವೊಂದರಲ್ಲಿ ನಿರ್ಣಯ ಮಂಡಿಸಿದರು. 1975 ನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಿದ ನಂತರ, ಬಹುತೇಕ ಎಲ್ಲಾ ರಾಷ್ಟ್ರಗಳಲ್ಲೂ ಮಾರ್ಚ್ 8ನ್ನು ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತಿದೆ.






### ಹುಟ್ಟುಹಬ್ಬದ ಶುಭಾಶಯಗಳು

2015ನೇ ವರ್ಷದ ಜನವರಿ, ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿನಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು/ ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**-ಸಂಪಾದಕೀಯ ಮಂಡಳಿ**

### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗಾಗಿ ಶ್ರಮಿಸಿ 2015ನೇ ವರ್ಷದ ಜನವರಿ, ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ 'ಬೆಸ್ಕಾಂ ಸ್ನೇಹಿ'ಯ ಭಾವಪೂರ್ಣ ಅಭಿನಂದನೆ ಹಾಗೂ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**

# ಆರೋಗ್ಯವೆ ಭಾಗ್ಯ- ದೇಹಕ್ಕೆ ಬೇಕು ಏಲಕ್ಕಿ

ಏಲಕ್ಕಿಯ ಘಮಲಿನಿಂದ ಅಡುಗೆಯ ರುಚಿ ಹೆಚ್ಚುತ್ತದೆ. ಹಣ್ಣಿನ ಜ್ಯೂಸ್ ಹಾಗೂ ಸಿಹಿ ಪದಾರ್ಥಗಳಲ್ಲೂ ಏಲಕ್ಕಿಯ ಕಂಪಿನಿಂದಾಗಿ ರುಚಿ ಅಧಿಕಗೊಳ್ಳುತ್ತದೆ. ಏಲಕ್ಕಿಯಲ್ಲಿ 2 ಬಗೆ. ಕಪ್ಪು ಏಲಕ್ಕಿ ಮತ್ತು ಹಸಿರು ಏಲಕ್ಕಿ. ಎರಡೂ ಏಲಕ್ಕಿಗಳಲ್ಲೂ ಆರೋಗ್ಯವರ್ಧಕ ಗುಣಗಳಿವೆ. ಅದರ ಬಗ್ಗೆ ಇಲ್ಲಿ ಒಂದಿಷ್ಟು ಬೆಳಕು ಚೆಲ್ಲಲಾಗಿದೆ.



- ಚರ್ಮದ ಕಾಂತಿಯನ್ನು ಹೆಚ್ಚಿಸಲು ಏಲಕ್ಕಿ ಸಹಕಾರಿ.
- ಮೂತ್ರ ಸಂಬಂಧಿ ಕಾಯಿಲೆಗಳನ್ನೂ ಇದು ನಿವಾರಿಸುವ ಶಕ್ತಿಯನ್ನು ಹೊಂದಿದೆ.
- ಅಜೀರ್ಣದ ಸಮಸ್ಯೆಯಿಂದ ಬಳಲುತ್ತಿರುವವರು ಏಲಕ್ಕಿ ಸೇವಿಸಿದರೆ ಶಮನಗೊಳ್ಳುವುದು.
- ತಲೆ ಸುತ್ತು, ಸುಸ್ತು, ಬಾಯಾರಿಕೆ ಉಂಟಾದಾಗ ನಿಂಬೆಯ ಶರಬತ್ತು ಮಾಡಿ ಅದಕ್ಕೆ 3 ಚಿಟಿಕೆ ಏಲಕ್ಕಿ ಬೆರೆಸಿ ಕುಡಿದರೆ ಕಡಿಮೆಯಾಗುತ್ತದೆ.
- ಏಲಕ್ಕಿ ಜೀರ್ಣಕ್ರಿಯೆಯನ್ನು ಸರಾಗಗೊಳಿಸುವ ಶಕ್ತಿ ಹೊಂದಿದೆ. ಇದೇ ಕಾರಣಕ್ಕೆ ಹಳ್ಳಿಗಳಲ್ಲಿ ಇಂದಿಗೂ ಊಟವಾದ ತಕ್ಷಣ ವೀಳ್ಯದೆಲೆಯ ಬದಲಾಗಿ ಕೆಲವರು ನಾಲ್ಕು ಏಲಕ್ಕಿ ಕಾಳನ್ನು ಅಗಿದು ತಿನ್ನುವ ರೂಢಿ ಇಟ್ಟುಕೊಂಡಿರುವುದನ್ನು ನೋಡಿರಬಹುದು.
- ನಿಯಮಿತವಾಗಿ ಏಲಕ್ಕಿ ಸೇವಿಸುವುದರಿಂದ ಕೂದಲಿನ ಆರೋಗ್ಯವೂ ಚೆನ್ನಾಗಿರುತ್ತದೆ.
- ಅತಿ ರಕ್ತದೊತ್ತಡವನ್ನು ಕಡಿಮೆಗೊಳಿಸಲು ಏಲಕ್ಕಿ ಸಹಕಾರಿ.
- ಒಣಕೆಮ್ಮು ಕಾಣಿಸಿಕೊಂಡಾಗ ಏಲಕ್ಕಿ ಪುಡಿಗೆ ಸ್ವಲ್ಪ ಶುಂಠಿ ಪುಡಿಯನ್ನು ಸೇರಿಸಿ ಸೇವಿಸಿದರೆ ಪರಿಣಾಮ ಬೀರುವುದು. ಮೇಲಿಂದ ಮೇಲೆ ಭೇದಿಯಾಗುತ್ತಿದ್ದರೆ ಸ್ವಲ್ಪ ಏಲಕ್ಕಿಯನ್ನು ಬೆಣ್ಣೆಯೊಡನೆ ಅರೆದು ತಿನ್ನುವುದರಿಂದ ಭೇದಿ ಕಡಿಮೆಯಾಗುತ್ತದೆ.
- ದೇಹದಲ್ಲಿರುವ ಕಲ್ಮಶಗಳನ್ನು ಹೊರಹಾಕಲು ಏಲಕ್ಕಿ ಸಹಕಾರಿ. ಊಟದ ನಂತರ ಏಲಕ್ಕಿ ತಿನ್ನುವುದರಿಂದ ಊಟದಲ್ಲಿ ಯಾವುದೇ ರೀತಿಯ ವಿಷ ಸೇರಿಕೊಂಡಿದ್ದರೆ ಅದು ಹೊರ ಹೋಗುತ್ತದೆ.
- ಏಲಕ್ಕಿಗೆ ಶ್ವಾಸಕೋಶ ಸಂಬಂಧಿ ಕಾಯಿಲೆಗಳನ್ನೂ ನಿವಾರಿಸುವ ಶಕ್ತಿಯನ್ನು ಹೊಂದಿದೆ.
- ಅಜೀರ್ಣ, ಎದೆ ಉರಿ, ವಾತದ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಏಲಕ್ಕಿ ಸಂಜೀವಿನಿ ಇದ್ದಂತೆ. ಏಲಕ್ಕಿಯಿಂದ ಮಾಡಿದ ಚಹಾ ಅಜೀರ್ಣದ ಮೂಲವಾಗಿ ಉಂಟಾಗುವ ತಲೆನೋವಿಗೆ ರಾಮಬಾಣ ಇದ್ದಂತೆ.
- ಶ್ವಾಸಕೋಶದಲ್ಲಿ ನೋವುಂಟಾದರೆ ಏಲಕ್ಕಿ ಸೇವನೆಯಿಂದ ನಿವಾರಣೆಯಾಗುತ್ತದೆ.
- ಬಾಯಿಯ ದುರ್ವಾಸನೆ ಹೋಗಲಾಡಿಸಿಕೊಳ್ಳಲು ಏಲಕ್ಕಿಗಿಂತ ಉತ್ತಮ ಸುಗಂಧ ಮತ್ತೊಂದಿಲ್ಲ.
- ಉಸಿರಾಟದಲ್ಲಿ ತಾಜಾತನ ಇರಬೇಕೆಂದರೆ ಏಲಕ್ಕಿಯನ್ನು ಅಗಿಯಬಹುದು.
- ಏಲಕ್ಕಿ ಚಹ ಸೇವಿಸುವುದರಿಂದ ಖಿನ್ನತೆ ಮಾಯವಾಗುತ್ತದೆಯಂತೆ!
- ನೆಗಡಿ ಮತ್ತು ಕೆಮ್ಮನ್ನು ನಿವಾರಿಸುವ ಶಕ್ತಿ ಇದಕ್ಕಿದೆ.
- ಸಂಶೋಧನೆಗಳ ಪ್ರಕಾರ ಕ್ಯಾನ್ಸರ್ ಗುಣಪಡಿಸುವ ಶಕ್ತಿ ಏಲಕ್ಕಿಗಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆಗಳೂ ನಡೆಯುತ್ತಿವೆ.
- ಆಸಿಡಿಟಿಯಿಂದ ತೇಗು ಬರುತ್ತಿದ್ದರೆ ಏಲಕ್ಕಿ ಸೇವನೆಯಿಂದ ಕಡಿಮೆಯಾಗುತ್ತದೆ.
- ರಕ್ತ ಹೆಪ್ಪುಗಟ್ಟುವ ಅಪಾಯವನ್ನು ಇದು ತಡೆಗಟ್ಟುತ್ತದೆ. ರಕ್ತ ಸಂಚಾರ ಸರಾಗವಾಗಲು ಸಹಾಯಮಾಡುತ್ತದೆ.
- ಹೃದಯದ ಆರೋಗ್ಯವನ್ನೂ ಸಮಸ್ಥಿತಿಯಲ್ಲಿಡಲು ಇದು ಸಹಕಾರಿ.
- ಆಸ್ತಮಾ ಸಮಸ್ಯೆಯಿಂದ ಬಳಲುವವರು ಹೆಚ್ಚು ಏಲಕ್ಕಿ ಉಪಯೋಗಿಸುವುದು ಒಳ್ಳೆಯದು.



- ಏಲಕ್ಕಿ ಸಿಪ್ಪೆ ಮತ್ತು ಕಾಳು ಮೆಣಸಿಗೆ ನೀರು ಹಾಕಿ ಅರ್ಧ ಗಂಟೆ ನೆನೆಸಿಟ್ಟು ಮಿಕ್ಸಿಯಲ್ಲಿ ನುಣ್ಣಗೆ ಅರೆಯಿರಿ. ನಂತರ 2ರಿಂದ 3 ಲೋಟ ಬಿಸಿ ನೀರು ಕಾಯಿಸಿಟ್ಟುಕೊಂಡು ಅದಕ್ಕೆ ಸೇರಿಸಿ. ಆರಿದ ನಂತರ ಹಣಿಯಾದ ತಿಳಿ ನೀರನ್ನು ಬಸಿಯಿರಿ. (ಮತ್ತೆ ಚರಟಕ್ಕೆ ಸ್ವಲ್ಪ ಬಿಸಿನೀರು ಹಾಕಿ ಬಳಸಬಹುದು) . ಈ ಹಣ್ಣಿಗೆ ಬೆಲ್ಲ, ನಿಂಬೆ ರಸ, ಉಪ್ಪು ಸೇರಿಸಿ ಮಿಶ್ರಣ ಮಾಡಿರಿ. ಫ್ರಿಜ್‌ನಲ್ಲಿ ತಂಪು ಮಾಡಿಕೊಂಡೂ ಕುಡಿಯಬಹುದು. ಇದು ಬಾಯಿ ರುಚಿ ಹೆಚ್ಚಿಸುತ್ತದೆಯಲ್ಲದೇ, ಅಜೀರ್ಣಕ್ಕೆ ಒಳ್ಳೆಯದು ಮತ್ತು ಪಿತ್ತ ಶಮನಕಾರಿ ಕೂಡ ಹೌದು.

ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ಅವರು ಗ್ರಿಡ್ ಸಂಪರ್ಕಿತ ಸೌರಶಕ್ತಿ ಮೇಲ್ಛಾವಣಿ ಯೋಜನೆಯನ್ನು ಬೆಸ್ಕಾಂ ನಿಗಮ ಕಚೇರಿಯಲ್ಲಿ ಉದ್ಘಾಟಿಸಿದರು.






ದಾವಣಗೆರೆ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಬೆಸ್ಕಾಂ ವಿಭಾಗ, ಉಪವಿಭಾಗಗಳ ಕಛೇರಿ ಕಟ್ಟಡಗಳ ಸಮುಚ್ಚಯ ಹಾಗೂ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದ ಕೆಲ ಚಿತ್ರಗಳು.














## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಂಕಜ್‌ಕುಮಾರ್ ಪಾಂಡೆ,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಎನ್. ನಾಗೇಶ್,** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀ ಬಿ.ಎಲ್. ಗುರುಪ್ರಸಾದ್,** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಆರ್.ಎಚ್. ಲಕ್ಷ್ಮೀಪತಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ವಿ.ಎಸ್. ಬಿದರಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ.ಸಂಘ | **ಸದಸ್ಯರು** |
| **ಶ್ರೀ ದಾಸ್‌ಪ್ರಕಾಶ್,** ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:

**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ನೆಲಮಹಡಿ, ಬೆ. ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **bescommagazine@gmail.com**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**
**ಸಂದೇಶ ಕಳುಹಿಸಿ: 9243150000 ವೆಬ್‌ಸೈಟ್: www.bescom.org**

Printed at Shubhodaya Printers, Mob: 99452 77806